ಮೆ॥ ಶಾರದಾ ಕ್ರಷಿಂಗ್ ವರ್ಕ್ಸ್ ರವರ ಸರ್ವೆ.ನಂ.18/1,18/2,18/3,18/4 ಮತ್ತು 18/5, ಕೆಂಚಿನದೋಣಿ-ಗ್ರಾಮ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 20 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,90,330 ಘನ ಮೀಟರ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಸಂಬಂಧಿಸಿದಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

ದಿನಾಂಕ : 08.11.2022

ವೇಳೆ : ಬೆಳಗ್ಗೆ 11.00 ಘಂಟೆ,

ಸ್ಥಳ : ಉದ್ದೇಶಿತ ಯೋಜನೆಯ ಪ್ರದೇಶ,
ಮೆ॥ ಶಾರದಾ ಕ್ರಷಿಂಗ್ ವರ್ಕ್ಸ್ ರವರ
ಸರ್ವೆ.ನಂ.18/1,18/2,18/3,18/4 ಮತ್ತು 18/5,
ಕೆಂಚಿನದೋಣಿ-ಗ್ರಾಮ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆ

ಮೆ॥ ಶಾರದಾ ಕ್ರಷಿಂಗ್ ವರ್ಕ್ಸ್ ರವರು, ಜಿಲ್ಲೆಯಲ್ಲಿ ಒಟ್ಟು 20.00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,90,330 ಟನ್‌ಗಳಷ್ಟು ಘನ ಮೀಟರ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 08.11.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ಮೆ॥ ಶಾರದಾ ಕ್ರಷಿಂಗ್ ವರ್ಕ್ಸ್ ರವರ ಸರ್ವೆ.ನಂ.18/1,18/2,18/3,18/4 ಮತ್ತು 18/5, ಕೆಂಚಿನದೋಣಿ-ಗ್ರಾಮ, ಕೊಪ್ಪಳ-ತಾಲೂಕು ಮತ್ತು ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು(PPT) | : | ಅನುಬಂಧ-5 |
| ಪರಿಸರ ಸಾರ್ವಜನಿಕ ಆಲಿಕೆ ಸಭೆ ಪ್ರಕ್ರಿಯೆಯ ಛಾಯಾ ಚಿತ್ರಗಳು | : | ಅನುಬಂಧ-6 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ.ಗಳು. | : | ಅನುಬಂಧ-7 |
| ಸಾರ್ವಜನಿಕರು/ಪರಿಸರಾಸಕ್ತ ಸಂಪನ್ಮೂಲವ್ಯಕ್ತಿಗಳುಸಲ್ಲಿಸಿದ ಅಹವಾಲುಗಳು | : | ಅನುಬಂಧ-8 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ 14-09-20 (ತಿದ್ದುಪಡಿ ದಿನಾಂಕ: 01-12-2009) ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ.

ಗಣಿ ಮತ್ತು ಭೂ-ವಿಜ್ಞಾನ ಇಲಾಖೆ ಪತ್ರದ ಸಂಖ್ಯೆ:SG/KPL/DMG/GL/NTN-07/2020-21/1472 ದಿನಾಂಕ:30.07.2020 ರಂದು "ಸೆಮಿ ಮೆಕ್ಯಾನೈಜಡ್ ವ್ಯವಸ್ಥೆಯಲ್ಲಿ ಕಟ್ಟಡ ಕಲ್ಲು ಗಣಿಗಾರಿಕೆಯ" ಯೋಜನೆಯನ್ನು ಅನುಮೋದಿಸಿ, ಒಟ್ಟು 20.00 ಎಕರೆ ಪ್ರದೇಶದಲ್ಲಿ ವರ್ಷಕ್ಕೆ 1,90,330 ಟನ್‌ಗಳಷ್ಟು ಘನ ಮೀಟರ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯ ಉತ್ಪಾದನೆಯ ಯೋಜನೆಯನ್ನು ಹೊಂದಿದೆ. (ಕ್ವಾರಿ ಯೋಜನೆಯ ಅವಧಿ 5 ವರ್ಷ). ಕ್ವಾರಿ ಯೋಜನೆಯನ್ನು ಅನುಮೋದಿಸಿ ವರ್ಷಕ್ಕೆ 1,90,330 ಟನ್‌ಗಳಷ್ಟು ಘನ ಮೀಟರ್‌ಗಳಷ್ಟು ಕಟ್ಟಡ ಕಲ್ಲು ಗಣಿಗಾರಿಕೆಯ ಉತ್ಪಾದನೆಯ ಯೋಜನೆಯನ್ನು ಹೊಂದಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರಕಾರ (ಆಘಾತ ಅಧ್ಯಯನ ವಿಭಾಗ) ನವದೆಹಲಿ, ಇವರ ಇ.ಐ.ಎ ಅಧಿಸೂಚನೆ ದಿನಾಂಕ: 14-09-2006 ರ ಪ್ರಕಾರ ಈ ಗಣಿಗಾರಿಕೆ ಯೋಜನೆಯು ಬಿ-1 ವರ್ಗವೆಂದು ಪರಿಗಣಿಸಲಾಗಿದೆ. ಯೋಜನೆ ಚಟುವಟಿಕೆ 1 (ಎ) ಇ.ಐ.ಎ ಅಧಿಸೂಚನೆ ಪರಿಸರ ಮಟ್ಟದ ಪ್ರಭಾವದ ಮೌಲ್ಯಮಾಪನ (ಇ.ಓ.ಎ) ಮತ್ತು ಪರಿಸರ ನಿರ್ವಹಣಾ ಯೋಜನೆ (ಇ.ಎಂ.ಪಿ) ನಿಯಮಗಳ ಉಲ್ಲೇಖದ (ಟಿ.ಓ.ಆರ್) ಆದಾರದ ಮೇಲೆ ಸದರಿ ಯೋಜನೆಯ Standards Terms of Reference ಅನ್ನು ದಿನಾಂಕ: 13.05.2021 ರಂದು ಅಂತಿಮಗೊಳಿಸಿ ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ನಡೆಸಲು ಕೋರುವಂತೆ ಮೆ॥ ಶಾರದಾ ಕ್ರಷಿಂಗ್ ವರ್ಕ್ಸ್ ಇವರು ತಿಳಿಸಿರುತ್ತಾರೆ.

ಯೋಜನಾ ಪ್ರವರ್ತಕರ ಮನವಿಯ ಮೇರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಕೊಪ್ಪಳ ಇವರಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸೂಕ್ತ ದಿನಾಂಕ ಮತ್ತು ಸಮಯವನ್ನು ನೀಡಲು ದಿನಾಂಕ:-26.08.2022 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ. ಅದರಂತೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವಂತೆ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 08.11.2022 ರಂದು ಸೂಚಿಸಿ ಸಭೆಯನ್ನು ನಡೆಸಲು ತಿಳಿಸಿರುತ್ತಾರೆ.

ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಪರ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ " ಕನ್ನಡ ಪ್ರಭ"' (ಕನ್ನಡ) ' ದಿ ಟೈಮ್ಸ್ ಆಫ್ ಇಂಡಿಯಾ" (ಆಂಗ್ಲ ಭಾಷೆ) ಗಳಲ್ಲಿ ದಿನಾಂಕ: 08.10.2022 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಪರ ದಂಡಾಧಿಕಾರಿಗಳು, ಕೊಪ್ಪಳ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 08.11.2022 ರಂದು, ಬೆಳಗ್ಗೆ.11.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಪರ ದಂಡಾಧಿಕಾರಿಗಳು ಕೊಪ್ಪಳ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎಸ್ ಸಿ ಸುರೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಕೊಪ್ಪಳ ಇವರು ಶ್ರೀಮತಿ ಸಾವಿತ್ರಿ ಬಿ ಕಡಿ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಕೊಪ್ಪಳ ಕೊಪ್ಪಳ ಜಿಲ್ಲೆ ಮತ್ತು ತಹಶೀಲ್ದಾರು . ಇವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಸ್ವಾಗತಿಸಿದರು, ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಎಂಟು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಅಲ್ಟ್ರಾಟೆಕ್ ಎನ್‌ವಿರಾನ್‌ಮೆಂಟಲ್ ಕನ್ಸಲ್ಟೆನ್ಸಿ & ಲ್ಯಾಬೊರೋಟರಿ ಇವರು ಸದರಿ ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು (ppt) ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

<u>ಶ್ರೀ. ಕರಿಕಲ್ಲಪ್ಪ ಸರ್ವೆ.ನಂ.170, ಕೂಕನಪಳ್ಳಿ ಸೀಮಾ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.</u>

- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಸದರಿ ಕಲ್ಲುಗಣಿಗಾರಿಕೆ ನಡೆಸಲು ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದರು.
- ರೈತರಿಗೆ ರಸ್ತೆಯ ಅನುಕೂಲ ಮಾಡಿಕೊಡುವುದು.
- ಸದರಿ ಗಣಿಗಾರಿಕೆಯ ಪಕ್ಕದಲ್ಲಿ ನನ್ನ ಜಮೀನನ್ನು ಇದ್ದು, ಗಣಿಗಾರಿಕೆಯನ್ನು ಮಾಡಲು ನಮ್ಮ ಜಮೀನಾಗಲಿ ವೈಯಕ್ತಿಕ ನನಗಾಗಲಿ ಯಾವುದೇ ತೊಂದರೆ ಇರುವುದಿಲ್ಲ.

<u>ಶ್ರೀ. ಬಸಪ್ಪ ಅರಸಿನಕೆರಿ ಸರ್ವೆ.ನಂ.211 ವನಬಳ್ಳಾರಿ-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.</u>

- ಪ್ರಸ್ತುತ ಇರುವ ಗಣಿಗಾರಿಕೆಯ ಘಟಕದವರು ಪ್ರತಿ ವರ್ಷ ನಮಗೆ ಬೆಳೆ ಪರಿಹಾರವನ್ನು ನೀಡುತ್ತಿರುತ್ತಾರೆ.
- ಗಣಿಗಾರಿಕೆಯವರು ರೈತರ ಜೊತೆಗೆ ಒಳ್ಳೆಯ ಬಾಂಧ್ಯವವನ್ನು ಬೆಳೆಸಿಕೊಂಡು ಹೋಗುವಂತೆ ಮತ್ತು ಗಣಿಗಾರಿಕೆಯನ್ನು ಪ್ರಾರಂಭಿಸುವ ಸಮಯದಲ್ಲಿ ಯಾವ ರೀತಿ ಮಾತನಾಡಿರುತ್ತಾರೆ ಆ ಮಾತಿನ ಪ್ರಕಾರ ನಡೆದುಕೊಳ್ಳುವಂತೆ ತಿಳಿಸಿದರು.

<u>ಶ್ರೀ. ಹಲಗಪ್ಪ ತಂದೆ ಸಣ್ಣಹನುಮಪ್ಪಗೌಡ್ರು ಸಾ॥ ವಣಬಳ್ಳಾರಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.</u>

- ಸದರಿ ಕಲ್ಲುಗಣಿಗಾರಿಕೆ ನಡೆಸಲು ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದರು.
- ರೈತರಿಗೆ ರಸ್ತೆಯ ಅನುಕೂಲ ಮಾಡಿಕೊಡುವುದು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.

- ಸದರಿ ಗಣಿಗಾರಿಕೆಯ ಪಕ್ಕದಲ್ಲಿ ನನ್ನ ಜಮೀನನ್ನು ಇದ್ದು, ಗಣಿಗಾರಿಕೆಯನ್ನು ಮಾಡಲು ನ ಜಮೀನಾಗಲಿ ವೈಯಕ್ತಿಕ ನನಗಾಗಲಿ ಯಾವುದೇ ತೊಂದರೆ ಇರುವುದಿಲ್ಲ.

ಶ್ರೀ. ಹನುಮಪ್ಪ ತಂದೆ ಮಲ್ಲಪ್ಪ ಮಣ್ಣೂರು ಸಾ।। ವಣಬಳ್ಳಾರಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಕಲ್ಲುಗಣಿಗಾರಿಕೆ ನಡೆಸಲು ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದರು.
- ರೈತರಿಗೆ ರಸ್ತೆಯ ಅನುಕೂಲ ಮಾಡಿಕೊಡುವುದು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು
- ಸದರಿ ಗಣಿಗಾರಿಕೆಯ ಪಕ್ಕದಲ್ಲಿ ನನ್ನ ಜಮೀನನ್ನು ಇದ್ದು, ಗಣಿಗಾರಿಕೆಯನ್ನು ಮಾಡಲು ನಮ್ಮ ಜಮೀನಾಗಲಿ ವೈಯಕ್ತಿಕ ನನಗಾಗಲಿ ಯಾವುದೇ ತೊಂದರೆ ಇರುವುದಿಲ್ಲ .

ಶ್ರೀ. ನಾಗರಾಜ ಕೆಂಚನದೋಣಿ ಸೀಮಾ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಕಲ್ಲುಗಣಿಗಾರಿಕೆ ನಡೆಸಲು ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದರು.
- ರೈತರಿಗೆ ರಸ್ತೆಯ ಅನುಕೂಲ ಮಾಡಿಕೊಡುವುದು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು
- ಸದರಿ ಗಣಿಗಾರಿಕೆಯ ಪಕ್ಕದಲ್ಲಿ ನನ್ನ ಜಮೀನನ್ನು ಇದ್ದು, ಗಣಿಗಾರಿಕೆಯನ್ನು ಮಾಡಲು ನಮ್ಮ ಜಮೀನಾಗಲಿ ವೈಯಕ್ತಿಕ ನನಗಾಗಲಿ ಯಾವುದೇ ತೊಂದರೆ ಇರುವುದಿಲ್ಲ .

ಶ್ರೀ. ಯಮನೂರ ಗೌಡರ, ಕೂಕನಪಳ್ಳಿ ಸೀಮಾ, ವನಬಳ್ಳಾರಿ-ಗ್ರಾಮ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಅಕ್ಕಪಕ್ಕದ ಜಮೀನಿನ ರೈತರು ತಮ್ಮ ಅಭಿಪ್ರಾಯವನ್ನು ಈಗಾಗಲೇ ತಿಳಿಸಿರುತ್ತಾರೆ. ಈ ಕ್ರಷರ್‌ನಿಂದ ಯಾವುದೇ ತೊಂದರೆ ಇರುವುದಿಲ್ಲ.
- ರೈತರಿಗೆ ಅನುಕೂಲವಾಗುವಂತೆ ನಡೆದುಕೊಳ್ಳುವುದು.

ಶ್ರೀ. ಮಲ್ಲಪ್ಪ  ತಂದೆ ಮಲ್ಲಪ್ಪ ಮಣ್ಣೂರು ಸಾ।। ವಣಬಳ್ಳಾರಿ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಕಲ್ಲುಗಣಿಗಾರಿಕೆ ನಡೆಸಲು ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದರು.
- ರೈತರಿಗೆ ರಸ್ತೆಯ ಅನುಕೂಲ ಮಾಡಿಕೊಡುವುದು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು
- ಸದರಿ ಗಣಿಗಾರಿಕೆಯ ಪಕ್ಕದಲ್ಲಿ ನನ್ನ ಜಮೀನನ್ನು ಇದ್ದು, ಗಣಿಗಾರಿಕೆಯನ್ನು ಮಾಡಲು ನಮ್ಮ ಜಮೀನಾಗಲಿ ವೈಯಕ್ತಿಕ ನನಗಾಗಲಿ ಯಾವುದೇ ತೊಂದರೆ ಇರುವುದಿಲ್ಲ .

ಶ್ರೀ. ಸಂಗಪ್ಪ ನೀಲಗೇರಿ , ಕೂಕನಪಳ್ಳಿ ಸೀಮಾ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸದರಿ ಕಲ್ಲುಗಣಿಗಾರಿಕೆ ನಡೆಸಲು ಸಂಪೂರ್ಣ ಒಪ್ಪಿಗೆಯನ್ನು ಸೂಚಿಸಿದರು.
- ರೈತರಿಗೆ ರಸ್ತೆಯ ಅನುಕೂಲ ಮಾಡಿಕೊಡುವುದು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು
- ಸದರಿ ಗಣಿಗಾರಿಕೆಯ ಪಕ್ಕದಲ್ಲಿ ನನ್ನ ಜಮೀನನ್ನು ಇದ್ದು, ಗಣಿಗಾರಿಕೆಯನ್ನು ಮಾಡಲು ನಮ್ಮ ಜಮೀನಾಗಲಿ ವೈಯಕ್ತಿಕ ನನಗಾಗಲಿ ಯಾವುದೇ ತೊಂದರೆ ಇರುವುದಿಲ್ಲ .

ಶ್ರೀ. ಬಿ.ವಿ.ರೆಡ್ಡಿ, ಶಕ್ತಿ ಎನ್‌ವಿರಾನ್‌ಮೆಂಟ್ ರೂರಲ್ ದೆವಲಪ್‌ಮೆಂಟ್ ಸೊಸೈಟಿ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಗಣಿಗಾರಿಕೆಯನ್ನು ನಡೆಸುವುದಕ್ಕೆ ಪರವಾನಿಗೆಯನ್ನು ನೀಡುವಂತೆ ಕೇಳಿಕೊಂಡರು.
- ಅಕ್ಕಪಕ್ಕದ ರೈತರಿಗೆ ಸಮಸ್ಯೆಗಳಿರುತ್ತವೆ ಅದನ್ನು ಬಗೆಹರಿಸಿಕೊಂಡು ಗಣಿಗಾರಿಕೆಯನ್ನು ನಡೆಸುವಂತೆ ತಿಳಿಸಿದರು.
- EC ಗೆ ಪರವಾನಿಗೆ ನೀಡಲು ಶಿಫಾರಸ್ಸು ಮಾಡುವಂತೆ ಕೇಳಿಕೊಂಡರು.
- CSR ಎಂಬ ಕಾಯ್ದೆ ಅಡಿಯಲ್ಲಿ ಗ್ರಾಮದಲ್ಲಿರುವ ದೇವಸ್ಥಾನಗಳಿಗೆ ಅನುಕೂಲ ಮಾಡಿ ಕೊಡಬಹುದಾಗಿದೆ ಎಂದು ತಿಳಿಸಿದರು.
- ಗಣಿಗಾರಿಕೆಯನ್ನು ಪ್ರಾರಂಭವಾಗುವುದಕ್ಕೆ ನಮ್ಮ ಸಂಸ್ಥೆಯಿಂದ ಸಂಪೂರ್ಣ ಬೆಂಬಲವನ್ನು ನೀಡುತ್ತೇನೆ ಎಂದು ತಿಳಿಸಿದರು.
- ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಗಣಗಾರಿಕೆಯನ್ನು ನಡೆಸಬಹುದಾಗಿರುತ್ತದೆ.

ಶ್ರೀಮತಿ ಮಂಜುಳಾ, ಜಿ.ಕೆ. ಎಜುಕೇಶನ್ & ರೂರಲ್ ಅರ್ಬನ್ ಡೆವಲಪ್‌ಮೆಂಟ್ ಸೋಸೈಟಿ (ರಿ) ಸಂಸ್ಥೆ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ರೈತರಿಗೆ ಮತ್ತು ಗ್ರಾಮಸ್ಥರಿಗೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಪರಿಸರ ಅಧಿಕಾರಿಗಳಿಂದ ಮಾಹಿತಿ ತೆಗೆದುಕೊಂಡು ಕಾರ್ಯನಿರ್ವಹಿಸುವಂತೆ ತಿಳಿಸಿದರು.
- ಗಣಿಗಾರಿಕೆಯನ್ನು ನಡೆಸಲು ನಮ್ಮ ಬೆಂಬಲ ಇರುತ್ತದೆ, ನಮ್ಮ ಬೆಂಬಲ ಪತ್ರವನ್ನು ನೀಡುತ್ತಿದ್ದೇವೆ.
- ಕುಡಿಯುವ ನೀರಿನ ಘಟಕವನ್ನು ನಿರ್ಮಿಸುವಂತೆ ತಿಳಿಸಿದರು.
- ನಿರುದ್ಯೋಗವನ್ನು ನಿರ್ಮೂಲನೆ ಮಾಡಲು ಇಂತಹ ಉದ್ದಿಮೆಗಳು ಬೇಕು,
- ಗಣಿಗಾರಿಕೆ ನಡೆಸುವುದರಿಂದ ಗ್ರಾಮದ ಅಭಿವೃದ್ಧಯಾಗುತ್ತದೆ ಎಂದು ತಿಳಿಸಿದರು.
- ಔಷಧಿಯ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.

ಶ್ರೀ ಹೇಮಂತ್ ಕುಮಾರ್ ಎನ್, ಡಾ॥ ಬಿ ಆರ್ ಅಂಬೇಡ್ಕರ್, ಸಾಹಿತ್ಯ ಸಾಂಸ್ಕೃತಿಕ ಕ್ರೀಡಾ ಕಲಾ ಯುವಕ ಸಂಘ (ರಿ) ಚಿತ್ರದುರ್ಗ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸಿ.ಎಸ್.ಆರ್ ನಿಯಮಗಳಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು. ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು. ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಭಿವದೃದ್ಧಿಪಡಿಸುವುದು.

ಶ್ರೀ ವಿ ನವೀನ್ ಗಂಗಾ ಜ್ಯೋತಿ ರೂರಲ್ ಡೆವಲಪ್‌ಮೆಂಟ್ ಸೋಸೈಟಿ ಅನಂತಪುರಂ' ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಗಣಿಗಾರಿಕೆಯು ಪ್ರಾರಂಭವಾಗುವುದರಿಂದ ಉದ್ಯೋಗ ದೊರಕಿದಂತಾಗುತ್ತದೆ ಎಂದು ತಿಳಿಸಿದರು.
- ಸಿ.ಎಸ್.ಆರ್ ನಿಯಮಗಳಡಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಭಿವದೃದ್ಧಿಪಡಿಸುವುದು.

ಶ್ರೀಮತಿ ಲಲಿತಾ ಶ್ರೀ ಅರುಂಧತಿ ಸಾಂಸ್ಕೃತಿಕ ಕಲಾ ಸಂಘ (ರಿ) ಚಿತ್ರದುರ್ಗ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಸಿ.ಎಸ್.ಆರ್ ನಿಯಮಗಳಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಭಿವದೃದ್ಧಿಪಡಿಸುವುದು.

ಶ್ರೀ ಎಸ್ ರಾಮಕೃಷ್ಣ, ಪಂಚಭೂತ ಪರಿರಕ್ಷಣಾ ಸಮಿತಿ ಪತ್ರ ಸಲ್ಲಿಸಿ, ತಮ್ಮ ಪತ್ರದಲ್ಲಿ , ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಪರಿಸರ ಸಮ್ಮತಿ ಪತ್ರವನ್ನು ನೀಡುವಂತೆ ತಿಳಿಸಿದರು.
- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಭಿವದೃದ್ಧಿಪಡಿಸುವುದು.
- ನೀರಿನ ಮಾಲಿನ್ಯವನ್ನು ತಡೆಗಟ್ಟಲು ಸಿಎಸ್‌ಆರ್ ಹಣವನ್ನು ಉಪಯೋಗಿಸಿಕೊಳ್ಳುವುದು.
- ಸಿಎಸ್‌ಆರ್ ಹಣವನ್ನು ಉಪಯೋಗಿಸಿಕೊಂಡು ರಸ್ತೆಗಳನ್ನು ಅಭಿವೃದ್ಧಿ ಪಡಿಸುವಂತೆ ತಿಳಿಸಿದರು.
- ಗಣಿಗಾರಿಕೆಯ ರಸ್ತೆಯುದ್ದಕ್ಕೂ ನೀರಿನ ಸಿಂಪಡಣೆಯನ್ನು ಮಾಡುವಂತೆ ತಿಳಿಸಿದರು.

ಶ್ರೀ ಬಿ ವೆಂಕಟೇಶ್ ಹರಿತಾ ಎಜುಕೇಶನಲ್ ರೂರಲ್ ವೆಲ್ ಫೆರ್ ಸೊಸೈಟಿ, ಇವರು ರವರು ಪತ್ರ ಸಲ್ಲಿಸಿ, ತಮ್ಮ ಪತ್ರದಲ್ಲಿ , ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಶಿಕ್ಷಣ ಆರೋಗ್ಯ ಮತ್ತು ರಸ್ತೆಗಳನ್ನು ನಿರ್ಮಿಸುವುದು.
- ಮಾಲಿನ್ಯವನ್ನು ತಡೆಗಟ್ಟಲು ಗಣಿಗಾರಿಕೆ ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸಬೇಕು.
- ಉದ್ಯೋಗಾವಕಾಶಗಳಲ್ಲಿ ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವುದು.
- ಸ್ಥಳೀಯರಿಗೆ ಮತ್ತು ಉದ್ಯೋಗಿಗಳಿಗೆ ವೈದ್ಯಕೀಯ ಮತ್ತು ಆರೋಗ್ಯ ಶಿಬಿರಗಳನ್ನು ನಡೆಸುವಂತೆ ತಿಳಿಸಿರುತ್ತಾರೆ.

ಶ್ರೀಮತಿ ಮಂಜುಳಾ, ಜಿ.ಕೆ. ಎಜುಕೇಶನ್ & ರೂರಲ್ ಅರ್ಬನ್ ಡೆವಲಪ್‌ಮೆಂಟ್ ಸೊಸೈಟಿ (ರಿ) ಸಂಸ್ಥೆ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಕ್ವಾರಿ ಗಣಿಗಾರಿಕೆಯನ್ನು ನಡೆಸಲು ನಮ್ಮ ಬೆಂಬಲ ಇರುತ್ತದೆ, ನಮ್ಮ ಬೆಮಬಲ ಪತ್ರವನ್ನು ನೀಡುತ್ತಿದ್ದೇವೆ.
- ರೈತರಿಗೆ ಮತ್ತು ಗ್ರಾಮಸ್ಥರಿಗೆ ಯಾವುದೇ ರೀತಿಯಲ್ಲಿ ಹಾನಿಯಾಗದಂತೆ ಪರಿಸರ ಅಧಿಕಾರಿಗಳಿಂದ ಮಾಹಿತಿ ತೆಗೆದುಕೊಂಡು ಕಾರ್ಯನಿರ್ವಹಿಸುವಂತೆ ತಿಳಿಸಿದರು.
- ನಿರುದ್ಯೋಗವನ್ನು ನಿರ್ಮೂಲನೆ ಮಾಡಲು ಇಂತಹ ಉದ್ದಿಮೆಗಳು ಬೇಕು,
- ಕ್ವಾರಿ ಗಣಿಗಾರಿಕೆ ನಡೆಸುವುದರಿಂದ ಗ್ರಾಮದ ಅಭಿವೃದ್ಧಯಾಗುತ್ತದೆ ಎಂದು ತಿಳಿಸಿದರು.
- ಆದಷ್ಟು ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.
- ಹೆಚ್ಚಿನ ಗಿಡ ಮರಗಳನ್ನು ಬೆಳೆಸುವಂತೆ ತಿಳಿಸಿದರು.

ಶ್ರೀ ಎಸ್ ಕೀರ್ತಿ ಎನ್‌ವಿರಾನ್‌ಮೆಂಟ್ ಸೊಸೈಟಿ ಆಂದ್ರಪ್ರದೇಶ ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಭಿವದೃದ್ಧಿಪಡಿಸುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.

ಮದರ್ ತೆರೆಸಾ ಯಜುಕೇಶನ್ ಡೆವಲಪ್‌ಮೆಂಟ್ ಸೋಸೈಟಿ (ರಿ) ಚಿಟಗುಪ್ಪ, ಇವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

- ಕ್ವಾರಿ ಸುತ್ತಲು ದಟ್ಟವಾದ ಗ್ರೀನ್ ಬೆಲ್ಟ್ ಅನ್ನು ಅಭಿವೃದ್ಧಿಪಡಿಸುವುದು.
- ಸಿ.ಎಸ್.ಆರ್ ನಿಯಮಗಳಡಿಯಲ್ಲಿ ಗ್ರಾಮಸ್ಥರಿಗೆ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಹಾಯವನ್ನು ಮಾಡುವುದು.
- ಸ್ಥಳೀಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ನೀಡಬೇಕು ಎಂದು ತಿಳಿಸಿದರು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷರುಗಳು ಪರಿಸರ ಅಧಿಕಾರಿಗಳಿಗೆ ಸಾರ್ವಜನಿಕ ಅಭಿಪ್ರಾಯಗಳನ್ನು ಮೌಖಿಕ ಮತ್ತು ಲಿಖಿತ ಹೇಳಿಕೆಗಳನ್ನು ಕ್ರೂಢಿಕರಿಸಿ ನಡುವಳಿಗಳನ್ನು ತಯಾರಿಸಲು ಸೂಚಿಸಿದರು.

ಮಾನ್ಯ ಅಧ್ಯಕ್ಷರು ಪರಿಸರ ಅಧಿಕಾರಿಗಳಿಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸುತ್ತಾ ಸಾರ್ವಜನಿಕ ಆಲಿಕೆ ಸಭೆಯನ್ನು ಮುಕ್ತಾಯಗೊಳಿಸಿ ನಡುವಳಿಗಳನ್ನು ಮಂಡಳಿಯ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದರು.

(ಸಾವಿತ್ರಿ ಬಿ ಕಡಿ ಕ.ಆ.ಸೇ)
ಅಪರ ಜಿಲ್ಲಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ
ಆಲಿಕೆ ಸಭೆ ಅಧ್ಯಕ್ಷರು ಕೊಪ್ಪಳ